Government of Karnataka
Department of Collegiate Education

# GOVERNMENT RAMNARAYAN CHELLARAM COLLEGE OF COMMERCE & MANAGEMENT

Re-accredited 'B' Grade by NAAC
Racecourse Road, Bengaluru - 560 001

NAAC Sponsored
One Day National Seminar on

## "Participatory Learning in Higher Education - Challenges and Opportunities"

Friday, 7th February 2020



**Organised by**
**Internal Quality Assurance Cell (IQAC)**

Government of Karnataka
DEPARTMENT OF COLLEGIATE EDUCATION

# GOVERNMENT RAMNARAYAN CHELLARAM COLLEGE OF COMMERCE & MANAGEMENT

[NAAC Reaccredited Grade : 'B']
Racecourse Road, Bengaluru - 560 001

**NAAC Sponsored**
**One Day National Seminar**
**on**

## 'PARTICIPATORY LEARNING IN HIGHER EDUCATION - CHALLENGES AND OPPORTUNITIES'

**Friday, the 7th February 2020**

***Organised by***

**INTERNAL QUALITY ASSURANCE CELL**

**NAAC SPONSORED ONE DAY NATIONAL SEMINAR ON "PARTICIPATORY LEARNING HIGHER EDUCATION - CHALLENGES AND OPPORTUNITIES"** : Published by the Editorial C... under the Patronship of **Dr. Syed Yousuff**, Principal, Government Ramnarayan Chellaram College of Commerce & Management, Race Course Road, Bengaluru - 560 001 in February 2020 (For Private Circulation...

Pages : 254 + iv

Copies : 125

Copyright : © GRCCMB, Bengaluru

**Editorial Board**

*Chief Editor:*

**Dr. Syed Yousuff**, Principal

*Editor :*

**Dr. G. Prahlad Chowdri,** Organising Secetary

***Members***

Dr. Subhash Chandra K.T., Department of Commerce & Management

Dr. Ajaz Ahmed Khan, Department of Commerce & Management

Dr. D. K. Nataraja, Department of Kannada

Dr. Narasimharaju K., Department of English

Dr. Sreelaxmi K., Department of Management

Dr. Shwetha Kalmath, Department of Library

*ISBN : 978-93-5396-797-0*

*Printed at:*

**M/s. Creative Graphics**

Sultanpet Main Road, Bengaluru - 560 053.

Ph : 22370262, 98860 54808

E-mail : creativegraphics2005@gmail.com

***NOTE:*** *The authors of the papers are solely responsible for technical content of the papers and views with references cited therein.*

| S.NO | PAPER TITLE WITH AUTHOR |
|---|---|
| 24 | DIGITAL TECHNOLOGY IN CURRICULUM ENRICHES PARTICIPATORY LEARNING — SAVINAYA H.L. |
| 25 | STUDY ON PARTICIPATORY LEARNING AND STUDENT EMPOWERMENT IN THE CLASSROOM — Dr. BHAGYALAKSHMI BALK |
| 26 | A CONCEPTUAL PAPER ON BEST PRACTICES OF ONLINE LEARNING AND TEACHING IN HIGHER EDUCATION — Dr. WASEEHA FIRDOSE |
| 27 | ACTIVE LEARNING IN COLLEGE CAMPUS WITH LIBRARY SUPPORT — Dr. MYTHILI K |
| 28 | TEACHER CENTRIC VS STUDENT CENTRIC DEBATE IN PARTICIPATORY LEARNING IN HIGHER EDUCATION — Dr. DHANANJAYA M. S |
| 29 | A STUDY ON THE ATTITUDE OF THE B.COM STUDENTS TOWARDS PARTICIPATORY LEARNING AT GRADUATE LEVEL — TAHSINA ANJUM |
| 30 | A STUDY ON THE ATTITUDE OF STUDENTS TOWARDS PARTICIPATORY LEARNING AT GRADUATE LEVEL - A STUDY AT GOVERNMENT FIRST GRADE COLLEGE, KENGERI — SWAMINATH S. |
| 31✓ | ಗಾಂಧಿ ಮತ್ತು ಶಿಕ್ಷಣ: ಪ್ರಚಲಿತ ಶೈಕ್ಷಣಿಕ ಸಮಸ್ಯೆಗಳಿಗೆ ಗಾಂಧೀಜಿಯವರ ಶಿಕ್ಷಣ ಸೂತ್ರಗಳ ಪರಿಹಾರ – ಶ್ರೀಮತಿ ಅನಿತಾ ಪಾಟೀಲ್ ಟಿ.ಹೆಚ್. |
| 32 | A STUDY ON ADOPTING PRACTICALITY TOWARDS REALISTIC SUSTAINABLE DEVELOPMENT IN HIGHER EDUCATION SYSTEM — RAMESH N. & JESLIN G |
| 33 | PERFORMANCE OF A TEACHER IN CONTEXT OF CHANGING HIGHER EDUCATION SCENARIO — DARA VIJAYA LAXMI & ASHWINI MUDDA |
| 34 | STUDENTS' PERCEPTION TOWARDS PARTICIPATORY LEARNING IN DEGREE COLLEGES — Dr. SHRIMANT TANGADE |
| 35 | LEARNING-RETENTION ACTIVITIES IN ARTICIPATORY LEARNING: ROLE OF CROSSWORD PUZZLES AS CLASSROOM TOOLS — Dr. B. SYAM SUNDAR |
| 36 | OBJECTIVES AND SCOPE — Dr. NAZIA OBED |
| 37 | ROLE OF TECHNOLOGY TOOLS IN PARTICIPATORY LEARNING PROCESS — TINA CHERRY |
| 38 | ANALYSIS OF PARTICIPATORY LEARNING TECHNIQUES IN MANAGEMENT EDUCATION- AN EMPIRICAL STUDY — Dr. HARSHITHA & MURALI MOHAN V |
| 39 | A STUDY ON THE CHALLENGES AND OPPORTUNITIES HIGHER EDUCATION IN BANGALORE — Dr. MOHAMMED FAROOQ PASHA & Dr. SAMIYA MUBEEN |
| 40 | A STUDY ON THE ATTITUDE OF STUDENTS TOWARDS PARTICIPATORY LEARNING IN HIGHER EDUCATION — PRIYANKA SHINGH & CHS NITYA RAO |
| 41 | SWAYAM: AN OPPORTUNITY FOR SELF LEARNING THROUGH ONLINE EDUCATION — SYED RAHMATHULLA |
| 42 | PARTICIPATORY EDUCATION AND ITS ROLE A STUDY IN RURAL FIRST GRADE COLLEGES IN TUMKUR AND KOLAR DISTRICTS, KARNATAKA — MAYA SARANGAPANI & S. JAYALAKSHMI PRIYA |
| 43 | PICTORIAL STUDY WITH REFERENCE TO MYSORE TRADITIONAL PAINTINGS IN PARTICIPATORY LEARNING PROCESS — SANTOSH KUMAR D.S. |
| 44 | A CONCEPTUAL PAPER ON PERCEPTIVE OF QUALITY IN HIGHER EDUCATION IN INDIA — SREE LAKSHMI K. |

# ಗಾಂಧಿ ಮತ್ತು ಶಿಕ್ಷಣ

## ಪ್ರಚಲಿತ ಶೈಕ್ಷಣಿಕ ಸಮಸ್ಯೆಗಳಿಗೆ ಗಾಂಧೀಜಿಯವರ ಶಿಕ್ಷಣ ಸೂತ್ರಗಳ ಪರಿಹಾರ

ಶ್ರೀಮತಿ ಅನಿತಾ ಪಾಟೀಲ್. ಟಿ. ಹೆಚ್.
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಲಹಂಕ, ಬೆಂಗಳೂರು – 560 064.
ಮೊ: 7760623349, E-mail: anitha.patel.t.h.6@gmail.com

"ಶೀಲವಿಲ್ಲದ ಶಿಕ್ಷಣ, ದುಡಿಮೆ ಇಲ್ಲದ ಸಂಪತ್ತು, ಆತ್ಮಶಾಂತಿ ಇಲ್ಲದ ಭೋಗ, ಮಾನವತಾ ಶೂನ್ಯ ವಿಜ್ಞಾನ, ತ್ಯಾಗವಿಲ್ಲದ ಪೂಜೆ ಸಲ್ಲದು"

### ಸಾರಲೇಖ

ಸತ್ಯ ಮತ್ತು ಅಹಿಂಸೆಗಳೆಂಬ ಅಪೂರ್ವ ಅಸ್ತ್ರಗಳ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾದಾರ್ಶನಿಕ ಯುಗಪುರುಷ ಮಹಾತ್ಮಾ ಗಾಂಧೀಜಿ. ಶಾಶ್ವತ ಮತ್ತು ತತ್ವಶಾಸ್ತ್ರವನ್ನು ತಮ್ಮ ಬದುಕಿನ ಭಾಗವೆಂದು ನಂಬಿದ್ದರು. "ಬದುಕೇ ಸತ್ಯದ ಜೊತೆಗಿನ ಪ್ರಯೋಗಶೀಲತೆ" ಗೆ ತಮ್ಮನ್ನು ಒಡ್ಡಿಕೊಂಡಿದ್ದರು. ಬಣ್ಣನೆಗೂ ಮೀರಿದ ಅತೀತ, ಅಸೀಮ ವ್ಯಕ್ತಿತ್ವದ ಆಕರ; ಅಹಿಂಸೆಯನ್ನು ಪ್ರತಿಪಾದಿಸುತ್ತಲೇ ಮತಾಂಧನೊಬ್ಬನ ಗುಂಡೇಟಿಗೆ ಬಲಿಯಾದ. ಹುತಾತ್ಮನಾದ ಮಹಾತ್ಮ, ಪ್ರಕೃತಿಗನುಸಾರವಾಗಿ ಸರಳವಾದ ಬದುಕು, ಉನ್ನತ ಆಲೋಚನೆಗಳ ಮೂಲಕ ಆತ್ಮ ವಿಮರ್ಶೆ ಮಾಡಿಕೊಂಡ ಜಾಗತಿಕ ವಕ್ತಾರ, ನೀತಿಯ ನಿಷ್ಣಾತ, ಗಾಂಧಿ ಎಂಬುದು ಅಕ್ಷರಶಃ ಸತ್ಯ.

ಭಗವದ್ಗೀತೆ ಮತ್ತು ಬೈಬಲ್‌ನಂತಹ ಧಾರ್ಮಿಕ ಗ್ರಂಥಗಳ ಸಾರವನ್ನು ಅರಿತು ಹೃದಯ ವೈಶಾಲ್ಯತೆ, ಸತ್ಯದ ಮಹತ್ವ, ಲೋಕ ಜ್ಞಾನ ತಿಳಿದ ಮಹಾ ಜ್ಞಾನಿ. ಈ ಗ್ರಂಥಗಳು ಮನಸ್ಸು ಮೃದುವಾಗಿ ನೈತಿಕ ಬೆಂಬಲ ಸೂಚಿಸಲು ಅವರಿಗೆ ಸಹಾಯ ಮಾಡಿದವು. ಸರ್ ಎಡ್ವಿನ್ ಅರ್ನಾಲ್ಡ್‌ರವರು ಬರೆದ "ದಿ ಲೈಟ್ ಆಫ್ ಏಷಿಯಾ" ಎಂಬ ಕೃತಿಯಲ್ಲಿನ ಬುದ್ಧನ ತತ್ವಗಳು ಅವರಲ್ಲಿ ಆಳವಾಗಿ ಪ್ರಭಾವ ಬೀರಿದವು. ಪಾಶ್ಚಿಮಾತ್ಯ ಚಿಂತಕರಾದ ಲಿಯೋ ಟಾಲ್‌ಸ್ಟಾಯ್‌ರವರ "ದಿ ಕಿಂಗ್‌ಡಮ್ ಆಫ್ ಗಾಡ್ ಈಸ್ ವಿಥಿನ್ ಯೂ" ಹಾಗೂ ರಸ್ಕಿನ್‌ರವರ "ಅನ್‌ಟು ದಿಸ್ ಲಾಸ್ಟ್" ಕೃತಿಗಳು ಅವರ ವ್ಯಕ್ತಿತ್ವ ಹಾಗೂ ಶೈಕ್ಷಣಿಕ ಚಿಂತನೆಗಳ ಬಗ್ಗೆ ಅಪಾರ ಪ್ರಭಾವ ಬೀರಿದವು.

ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗ ನೇಟಾಲ್ ಭಾರತೀಯ ಕಾಂಗ್ರೆಸ್ ಒಂದು ಶಾಶ್ವತ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಗಾಂಧೀಜಿಯವರು ಒಂದು ಪ್ರಮುಖ ಕಾರಣ. ಅಲ್ಲಿನ ಪುಸ್ತಕ ಭಂಡಾರ, ಚರ್ಚೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು. 1904ರಲ್ಲಿ ಪ್ರಕಟಿಸಿದ 'ಇಂಡಿಯನ್ ಒಪೀನಿಯನ್' ವಾರಪತ್ರಿಕೆಯಲ್ಲಿ ಗಾಂಧೀಜಿಯವರು ಗುಜರಾತಿ, ತಮಿಳು, ಹಿಂದಿ, ಇಂಗ್ಲೀಷ್ ಭಾಷೆಗಳಲ್ಲಿ ಅಗ್ರ ಲೇಖನ ಬರೆಯುತ್ತಿದ್ದರು.

ಫೀನಿಕ್ಸ್, ಟಾಲ್‌ಸ್ಟಾಯ್ ಫಾರ್ಮ್‌ನಂತಹ ಆಶ್ರಮದ ಶೈಕ್ಷಣಿಕ ಕೇಂದ್ರಗಳಲ್ಲಿ ಕರಕುಶಲ ಕೌಶಲ್ಯಾಧಾರಿತ ವೃತ್ತಿಪರ ಶಿಕ್ಷಣ ಗಾಂಧೀಜಿಯವರ ಸ್ವಾವಲಂಬಿ ಶಿಕ್ಷಣದ ಬುನಾದಿಗಳಾಗಿದ್ದವು. ದಕ್ಷಿಣ ಆಫ್ರಿಕಾದ ನಾಡು ಗಾಂಧೀಜಿಯವರ ಈ ವಿಶಿಷ್ಟ, ವಿನೂತನ, ಶೈಕ್ಷಣಿಕ ಪ್ರಾಯೋಗಿಕತೆಯ ಕೇಂದ್ರವಾಗಿತ್ತು. ಭಾರತಕ್ಕೆ ಬಂದಾಗ ವಾರ್ಧಾ ಶಿಕ್ಷಣ ಯೋಜನೆ, 1937ರಲ್ಲಿ ನಾಂದಿ ಹಾಡಿತು. 1954ರ ಹೊತ್ತಿಗೆ ಕೊಠಾರಿ ಶಿಕ್ಷಣ ಆಯೋಗ ಇದನ್ನು ಮುಂದುವರೆಸಿಕೊಂಡು ಹೋಯಿತು.

ಗಾಂಧೀಜಿಯವರ ಶಿಕ್ಷಣ ಕ್ರಮದಲ್ಲಿ ಮೂಲಭೂತ ಶಿಕ್ಷಣ (ನಯೀ ತಾಲೀಮ್), ರಾಷ್ಟ್ರೀಯ ಶಿಕ್ಷಣ, ವಯಸ್ಕರ ಶಿಕ್ಷಣ, ನೈಸರ್ಗಿಕ ಶಿಕ್ಷಣ, ಸ್ತ್ರೀ ಶಿಕ್ಷಣ, ಮಾತೃ ಭಾಷೆಯ ಮಾಧ್ಯಮದಲ್ಲಿ ಶಿಕ್ಷಣ, ಪಠ್ಯ ಕ್ರಮ, ಅಧ್ಯಾಪಕರ ವ್ಯಕ್ತಿತ್ವ, ಲೈಂಗಿಕ ಶಿಕ್ಷಣದಂತಹ ಹಲವಾರು ಯೋಜನೆಗಳು ಶಿಶು ಮತ್ತು ಅಧ್ಯಾಪಕರ ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ನೈತಿಕ ಶಿಕ್ಷಣದ ಅವಶ್ಯಕತೆಯನ್ನು ಪ್ರತಿಪಾದಿಸಿದರು.

ಶಾಂತಿ, ಸೌಹಾರ್ದತೆಯ ಸಮಾಜಕ್ಕೆ ದಿಪ್ಪಮಸ್ತು, ಬುದ್ಧಿವಂತ ಮನುಷ್ಯನಿಗಿಂತ, ಹೃದಯವಂತ, ಶ್ರೀಮಂತ, ಮಾನವೀಯ ಮೌಲ್ಯಗಳ ಅವಶ್ಯಕತೆಯಿಂದಾಗಿ, ಗಾಂಧೀಜಿಯವರು ಶಿಕ್ಷಣವನ್ನು ತಮ್ಮ ರಚನಾತ್ಮಕ ಕಾರ್ಯಗಳಲ್ಲಿ ಅಳವಡಿಸಿಕೊಂಡರು. ಮನುಷ್ಯ ನಿಸರ್ಗದ ಕೂಸು, ಪ್ರಾಕೃತಿಕವಾಗಿ ಸಮುದ್ರದ ಮರಳು ದಂಡೆ, ಬೆಟ್ಟ ಗುಡ್ಡಗಳೂ ಸಹ


ISBN : 978-93-5396-797-0

ಕಲಿಯುವ ಪ್ರಕ್ರಿಯೆಯಲ್ಲಿ ಸಹಾಯ ಮಾಡುತ್ತವೆ. ಪಠ್ಯ ಕ್ರಮವಿಲ್ಲದ ಪುಸ್ತಕ ರಹಿತ ಉಚಿತ ಶಾಲೆಗಳ ಬಗ್ಗೆ ರಸ್ಕಿನ್‌ರವರ "ಪ್ರಕೃತಿಗೆ ಹಿಂತಿರುಗಿ" ಪ್ರಭಾವಿತರಾದರು. ತಮ್ಮ ಪತ್ರಿಕೆಗಳಾದ "ಯಂಗ್ ಇಂಡಿಯಾ" ಮತ್ತು "ಹರಿಜನ" ದಲ್ಲಿ ವಿವರಿಸಿದ್ದಾರೆ.

ಗಾಂಧೀಜಿಯವರ ಶೈಕ್ಷಣಿಕ ವಿಚಾರಗಳು ಅನುಭಾವ ಹಾಗೂ ಪ್ರಯೋಜನಕಾರಿ ಸಿದ್ಧಾಂತವಾಗಿದ್ದವು. ಅವರ ತತ್ವ, ತಂತ್ರ, ಸತ್ವದ ಸಾಧನೆ ಮತ್ತು ವೈಚಾರಿಕತೆಯಿಂದ ಕೂಡಿದ್ದವು. ದಿನನಿತ್ಯದ ಅನುಭವಗಳು, ಪಕ್ವವಾದ ಯೋಜನೆಗಳಾಗಿದ್ದವು.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಯಾಂತ್ರಿಕ ಜ್ಞಾನಾರ್ಜನೆಯಲ್ಲಿ ಅಂಕ ಗಳಿಕೆಯ ಕಾರ್ಖಾನೆಯ ಉತ್ಪಾದಕ ವಸ್ತುವಾಗಿ ವಿದ್ಯಾರ್ಥಿಗಳು ಹೊರ ಬೀಳುತ್ತಿದ್ದಾರೆ. ಶಿಕ್ಷಣ ವ್ಯವಸ್ಥೆಯ ಭಾರ ಕುಸಿಯುತ್ತಿದೆ. ಗಾಂಧೀಜಿಯವರ ಅಂತಃಸತ್ವ, ಸತ್ಯ, ನೈತಿಕತೆ, ಸಾಮಾಜಿಕ ಅನುಭವಗಳ ಅವಶ್ಯಕತೆ ಇದೆ. ಅವರ ಮೌಲ್ಯಯುತ ಶೈಕ್ಷಣಿಕ ಚಿಂತನೆಗಳ ಅಗತ್ಯತೆ ಇದೆ.

**ಪ್ರಾಸ್ತಾವಿಕ ಪದಗಳು:** ಪ್ರಯೋಗಶೀಲತೆ,ಟಾಲ್‌ಸ್ಟಾಯ್ ಫಾರ್ಮ್, ಕೌಶಲ್ಯ ತರಬೇತಿ,ನಯೀ ತಾಲೀಮ್.

**"ಸಾಕ್ಷರತೆ ಶಿಕ್ಷಣವಲ್ಲ, ಸಾಕ್ಷರತೆ ಶಿಕ್ಷಣದ ಅಂತ್ಯವೂ ಅಲ್ಲ, ಆರಂಭವೂ ಅಲ್ಲ, ಮಗುವಿನ ಶಾರೀರಿಕ, ಬೌದ್ಧಿಕ, ಆಧ್ಯಾತ್ಮಿಕ, ಸರ್ವಾಂಗೀಣ ಬೆಳವಣಿಗೆ"**

ಶಿಕ್ಷಣ ಮಾನವನ ಸರ್ವತೋಮುಖ ಬೆಳವಣಿಗೆಗೆ ಅತ್ಯಾವಶ್ಯಕ. ಭಾಷೆಯಿಂದ ಮಾನವನ ಇತಿಹಾಸ ಆರಂಭವಾದರೆ, ಶಿಕ್ಷಣದಿಂದ ಅವನ ವಿಕಾಸ ವಿಸ್ತಾರವೂ ಆರಂಭವಾಗುತ್ತದೆ. ಸಂಸ್ಕೃತಿಯು ಸಂಸ್ಕಾರದ ಮುಖ್ಯ ವಾಹಕ ಭಾಷೆಯಾದರೆ, ಶಿಕ್ಷಣ ಅದರ ಪ್ರಮುಖ ಸಾಧನವಾಗಿದೆ. ಭಾಷೆ ಮತ್ತು ಶಿಕ್ಷಣ ಮಾನವನ ಎರಡು ಕಣ್ಣುಗಳಿದ್ದಂತೆ. ಭಾಷೆಗೆ ಅನೇಕ ವಿಚಾರಗಳಿಗೆ ಜನತೆಯ ಮನಸ್ಸನ್ನು ತಲುಪಿ ಬಡಿದೆಬ್ಬಿಸುವ ಶಕ್ತಿ ಇದೆ. ಶಿಕ್ಷಣ ಬುನಾದಿಯ ಶಕ್ತಿಯ ತಂತ್ರವಷ್ಟೆ.

ಆದರ್ಶ, ಅನುಷ್ಠಾನ ಸತ್ಯದ ಸ್ವಪ್ನವನ್ನು ಸಾಕಾರಗೊಳಿಸುವ ಸಾಧನೆಗಾಗಿ ಶೈಕ್ಷಣಿಕ ಪ್ರಯೋಗದಿಂದ ಎಳೆಯರ ಮನಸ್ಸನ್ನು ತಿದ್ದಿ-ತೀಡುವ ಪ್ರಯತ್ನವನ್ನು ಮಾಡಿದ ಬಹುಮುಖ ಪ್ರತಿಭೆ ಗಾಂಧೀಜಿಯವರು ಶಿಕ್ಷಣ ತಜ್ಞರಾಗಿ ತಿಳುವಳಿಕೆ, ವರ್ಚಸ್ಸು, ಕೌಶಲತೆ, ಹೃದಯ ವೈಶಾಲ್ಯತೆ, ಸೃಜನಶೀಲತೆ, ಸೇವಾಮನೋಭಾವ, ಚಿಂತನ-ಮಂಥನಗಳು, ಅನುಭಾವ, ಶಿಕ್ಷಣ ಕ್ಷೇತ್ರವು ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರಭಾವ ಬೀರಿದವು.

ಗಾಂಧೀಜಿಯವರ ಆತ್ಮಕಥನವೇ ಸತ್ಯ ಪ್ರಯೋಗಗಳ ಸರಮಾಲೆಯ ಕಥಾಸರಣಿ. ಪ್ರಾರ್ಥನೆ, ಮಾನಸಿಕ ಸ್ವಚ್ಛತೆ, ಆರೋಗ್ಯ, ಆಧ್ಯಾತ್ಮದ ಅಂಶಗಳನ್ನು ಮೌಲ್ಯಯುತವಾಗಿ, ಫಲಪ್ರದವಾಗಿ ಸಾಧಿಸಿದ್ದಾರೆ. ಸ್ವಾತಂತ್ರ್ಯದ ಹೋರಾಟದಲ್ಲಿ ರಾಷ್ಟ್ರೀಯ, ಜಾಗೃತಿಯ ಚಳುವಳಿಯ ಮೂಲಕ ವಿದ್ಯಾರ್ಥಿಗಳನ್ನು ಹುರಿದುಂಬಿಸಿ, ಭಾಗವಹಿಸಲು ಕಾರಣರಾಗಿದ್ದರು. ಅನಂತರ ರಾಷ್ಟ್ರೀಯ ಶಿಕ್ಷಣದ ಅವಶ್ಯಕತೆಯನ್ನು ಮನಗಂಡರು. 1937ರ ವಾರ್ಧಾ ಶಿಕ್ಷಣ ಯೋಜನೆ ಅದನ್ನು ವೃತ್ತಿಮೂಲ ಶಿಕ್ಷಣವೆಂದು ಕರೆಯಲಾಗಿತ್ತು. ಗಾಂಧೀಜಿಯವರ ಶೈಕ್ಷಣಿಕ ಚಿಂತನೆಗಳು ಅವರ 40 ವರ್ಷದ ಅನುಭಾವವಾಗಿತ್ತು. ಅವರು ವಾಸ್ತವಿಕತೆಯನ್ನು, ಬಹುಮುಖ್ಯ ಶಿಕ್ಷಣದ ಅವಶ್ಯಕತೆ ಎಂದು ನಂಬಿದ್ದರು.

ಶಿಕ್ಷಣ ಒಂದು ಗುರಿಯಲ್ಲ, ಸಾಧನ ಉತ್ತಮ ವ್ಯಕ್ತಿತ್ವ ನಿರ್ಮಾಣ ಮಾಡುವುದೇ ನಿಜವಾದ ಶಿಕ್ಷಣ. ಅನಕ್ಷರತೆಯ ನಿರ್ಮೂಲನವಷ್ಟೇ ಅಲ್ಲ, ಜ್ಞಾನಾರ್ಜನೆಯ ಜೊತೆಯಲ್ಲಿ ಧನಾರ್ಜನೆ, ಸರಳ ಬದುಕಿನ ಸೂತ್ರ ಎಂದು ಹೇಳಿದ್ದಾರೆ. ಇವರ ಶಿಕ್ಷಣದ ಸೂತ್ರಗಳಲ್ಲಿ ಸೌಹಾರ್ದತೆ, ಪ್ರಾಮಾಣಿಕತೆ, ಕರ್ತವ್ಯ, ದೇಶಪ್ರೇಮ, ಸಾಮಾಜಿಕ ಸೇವೆಯ ಅಂಶಗಳಿವೆ. ಆರೋಗ್ಯಕರ ಸಮಾಜಕ್ಕೆ ಆರ್ಥಿಕ, ಭೌತಿಕ ಪ್ರಗತಿಯ ಜೊತೆಗೆ ಅನುಭಾವ ಶಿಕ್ಷಣ ಸ್ವಾವಲಂಬನೆಯನ್ನು ನೀಡುತ್ತದೆ.

ಉದ್ದೇಶ:- ಶಿಶುವಿನ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯವಾದ ದೈಹಿಕ ಶಿಕ್ಷಣ, ನೈಸರ್ಗಿಕ ಶಿಕ್ಷಣ, ನೈತಿಕ ಶಿಕ್ಷಣದ ಮೂಲಕ ಹಸ್ತ, ಹೃದಯ, ಶಿರ, ಸಮತೋಲನ ಸೌಹಾರ್ದ ಬೆಳವಣಿಗೆಗೆ ಅವಶ್ಯಕತೆ ಇದೆ ಎಂದಿದ್ದಾರೆ. ಮನೆಯ ವಾತಾವರಣ, ಶಾಲೆಯ ವಾತಾವರಣ, ಶಿಶುವಿನ ಪ್ರಗತಿಗೆ ಹೊಂದಾಣಿಕೆಯಾಗಬೇಕು.

ಶಿಕ್ಷಕರು ಸಂಬಳದ ಆಕಾಂಕ್ಷಿಗಳಾಗಬಾರದು, ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಫಲಾನುಭವಿಗಳಾಗಿ ಮಾಡಬೇಕು. ವಿದ್ಯಾರ್ಥಿಗಳಿಗೆ ಸಾಮಾಜಿಕ ಅಗತ್ಯತೆಗಳನ್ನು ತಿಳಿಯಲು ಕಸುಬು ಆಧಾರಿತ ವೃತ್ತಿಪರ ಶಿಕ್ಷಣದ ಅವಶ್ಯಕತೆಯ ಉದ್ದೇಶದ ಬಗ್ಗೆ ತಿಳಿಸಿದ್ದಾರೆ.

ಸಾಮಾಜಿಕ ನಡೆ-ನುಡಿ, ವೇಶಭೂಷಣಗಳು, ಸಂಸ್ಕೃತಿಯ ಅಂಗವಾಗಿರುವುದರಿಂದ ಸಾಂಸ್ಕೃತಿ ಉದ್ದೇಶವಾಗಿ ವಿದ್ಯಾರ್ಥಿಗಳಲ್ಲಿ ಆತ್ಮ ಉನ್ನತಿಯ ಗುಣ, ಮಾನವ ಸಹಜ ನಡವಳಿಕೆ ಹಾಗೂ ಪರಿಚಿತ ದೇಶೀಯ ಪರಿಸರದ ಬಗ್ಗೆ ಹೇಳಿದ್ದಾರೆ. ಉತ್ತಮ ಚಾರಿತ್ರ್ಯದಿಂದ ವ್ಯಕ್ತಿತ್ವದ ಬೆಳವಣಿಗೆಯನ್ನು ಪ್ರತಿಪಾದಿಸಿದ್ದಾರೆ.

## ಗಾಂಧೀಜಿಯವರ ಪ್ರಮುಖ ಶಿಕ್ಷಣ ಸೂತ್ರಗಳು

(1) ಉಚಿತ ಶಿಕ್ಷಣ: ಗಾಂಧೀಜಿಯವರು 7 ಮತ್ತು 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಸಾರ್ವತ್ರಿಕ ಶಿಕ್ಷಣದ ಮಹತ್ವದ ಬಗ್ಗೆ ತಿಳಿಸಿದ್ದಾರೆ. 1 ರಿಂದ 10ನೇ ತರಗತಿಯ ವರೆಗೆ ಮಾತೃಭಾಷೆಯಲ್ಲಿ ಶಿಕ್ಷಣವನ್ನು ನೀಡಬೇಕು. ಆಂಗ್ಲ ಭಾಷೆಯ ಅವಶ್ಯಕತೆ ಇಲ್ಲ ಎಂದಿದ್ದಾರೆ.

(2) ವೃತ್ತಿಪರ ಮತ್ತು ಕರಕುಶಲ ಆಧಾರಿತ ಶಿಕ್ಷಣ: ಇದರಲ್ಲಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಕರಕುಶಲ ಕಲೆಯ ಮಹತ್ವದ ಬಗ್ಗೆ ಹಾಗೂ ಗುಣಾತ್ಮಕ ಶಿಕ್ಷಣದ ಗಳಿಕೆಯ ಬಗ್ಗೆ ಹೇಳಿದ್ದಾರೆ.

(3) ಮೌಲ್ಯಾಧಾರಿತ ಶಿಕ್ಷಣ: ಶಿಕ್ಷಣ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಆದರ್ಶವಾಗಿರಬೇಕು. ಆಧುನಿಕ ಸಮಾಜ ಶಿಸ್ತಿನ ಅಗತ್ಯತೆಗಾಗಿ ಸಂಘಸಂಸ್ಥೆಗಳು ಧನ ಸಹಾಯ ಮಾಡಬಹುದು. ಸ್ವದೇಶಿ ಸಂಸ್ಕೃತಿ ನೀತಿಯನ್ನು ಬೆಳೆಸಿಕೊಳ್ಳಬಹುದು. ಕರಕುಶಲ ಕಲೆಯನ್ನು ಔದ್ಯೋಗಿಕ ಮಹತ್ವಕ್ಕಾಗಿ ಹೇಳಿಕೊಡಬೇಕು.

(4) ಮಾತೃಭಾಷೆಯ ಮಹತ್ವ: ಶಿಕ್ಷಣದ ಮಾಧ್ಯಮ ಮಾತೃಭಾಷೆಯಾದರೆ ಮಗುವಿನ ಆಲೋಚನಾ ಕ್ರಮಕ್ಕೆ ಹೊಂದಾಣಿಕೆಯಾಗುತ್ತದೆ. ಒಂದು ವೇಳೆ ಅನ್ಯ ಭಾಷೆಯಲ್ಲಿದ್ದರೆ ಗೊಂದಲ, ಮುಜುಗರ ಮತ್ತು ಆಲೋಚನೆಗಳ ಹಿಂಸೆ, ಸಂದಿಗ್ಧತೆಯನ್ನು ಮೂಡಿಸುತ್ತದೆ. ಮಾತೃಭಾಷೆಯ ಶಿಕ್ಷಣ ಪ್ರಾಕೃತಿಕವಾಗಿ, ಸ್ವಾಭಾವಿಕವಾಗಿ ಉತ್ತಮವಾದುದು. ಅವರಿಗೆ ಇಂಗ್ಲಿಷ್ ಭಾಷೆ ಗೊತ್ತಿದ್ದರೂ ಗುಜರಾತಿ ಭಾಷೆಯಲ್ಲಿ ರಸ್ಕಿನ್‌ರವರ "ಅನ್ಟು ದಿಸ್ ಲಾಸ್ಟ್" ಕೃತಿಯನ್ನು "ಸರ್ವೋದಯ" ಎಂದು ಅನುವಾದಿಸಿದ್ದಾರೆ.

(5) ಅಹಿಂಸಾ ಶಿಕ್ಷಣ: ಪಾಶ್ಚಿಮಾತ್ಯ ರಾಷ್ಟ್ರಕ್ಕೆ ಶಿಕ್ಷಣ ಸರ್ವೋದಯದ ಬಗೆಗೆ ಅಹಿಂಸಾ ತತ್ವದ ಅವಶ್ಯಕತೆ. ಇದರಿಂದ ಶಿಕ್ಷಣವು ಭವಿಷ್ಯದಲ್ಲಿ ಉತ್ತಮ ನಾಗರಿಕರನ್ನಾಗಿಸುವುದು. ಮೌಲ್ಯಾಧಾರಿತ ಶಿಕ್ಷಣದ ವ್ಯವಸ್ಥೆಗೆ ಇದು ಸಹಾಯ ಮಾಡುತ್ತದೆ. ಇದರಿಂದಾಗಿ ಸ್ವಚ್ಛ ಹಿಂಸೆಯಿಲ್ಲದ, ಜಗಳಗಳು ಇಲ್ಲದಂತಾಗುವುದು.

(6) ಪ್ರಾಚೀನ ಭಾರತ:-ಶಿಕ್ಷಣದ ವ್ಯವಸ್ಥೆಯಲ್ಲಿ ವ್ಯಕ್ತಿಯ ಗೌರವವನ್ನು ಅದರ ಕ್ರಮವನ್ನು ಎತ್ತಿ ಹಿಡಿದಿದ್ದಾರೆ. ಮಾನವ ಕಲ್ಯಾಣದ ಬಗ್ಗೆ ಶ್ರದ್ಧೆ, ಪ್ರಾಮಾಣಿಕತೆಯ ಮಹತ್ವವನ್ನು ಹೇಳಿದ್ದಾರೆ.

(7) ಸ್ವಾತಂತ್ರ್ಯದ ಪ್ರಯೋಗಶೀಲತೆಗೆ ಹೆಚ್ಚು ಪ್ರಾಮುಖ್ಯತೆ- ಗಾಂಧೀಜಿಯವರು ಪ್ರಯೋಗಶೀಲತೆಯಲ್ಲಿ ನಂಬಿಕೆ ಇಟ್ಟವರು. ವ್ಯಕ್ತವಾಗಿ. ಮಕ್ಕಳಲ್ಲಿ ಶಿಸ್ತನ್ನು, ಸಹನೆ, ಗುಣಾತ್ಮಕ, ಶಿಸ್ತು, ಆರೋಗ್ಯ ತಿಳಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳು ಸ್ವಾವಲಂಬಿಗಳಾಗಿ ಬದುಕುತ್ತಾರೆ. ಹಾಗೂ ಶಿಸ್ತನ್ನು ಅಭ್ಯಾಸ ಮಾಡುತ್ತಾರೆ.

(8) ಸಮಾಜ ಸೇವೆ ಮತ್ತು ಸಾಮಾಜಿಕ ಜವಾಬ್ದಾರಿ: ಪ್ರತಿ ವಿದ್ಯಾರ್ಥಿ ಸಮಾಜಮುಖಿಯಾಗಬೇಕು. ತನ್ನ ಜ್ಞಾನವನ್ನು ಸಮಾಜಕ್ಕೆ ನೀಡಬೇಕು. ಅಸಹಾಯಕರಿಗೆ, ರೋಗಿಗಳಿಗೆ, ಬಡವರ ದೃಷ್ಟಿಯಿಂದ ನೋಡಬೇಕು. ಒಟ್ಟು ಇಡೀ ಸಮಾಜದ ಅಭ್ಯುದಯಕ್ಕಾಗಿ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತದೆ.

ಶಿಕ್ಷಣ, ವಿದ್ಯಾರ್ಥಿ ಬದುಕಿನ ಪ್ರಮುಖ ಅಂಗವೆಂದು ಹೇಳಿದ್ದಾರೆ. ಶಿಕ್ಷಣ ಅಂತರ್ಗತವಾಗಿರಬೇಕು. ಸಾಮಾಜಿಕ ಬದಲಾವಣೆ ಅವಶ್ಯಕ. "ನೈತಿಕ ಶಿಕ್ಷಣದ ಪರಿಕಲ್ಪನೆಗಳ ಆದರ್ಶದ ಉದ್ದೇಶವನ್ನು ಜೊತೆಗೆ ಪ್ರಯೋಗಿಸಬೇಕು ವಿದ್ಯಾರ್ಥಿಗಳು ಅನುಸರಿಸಬೇಕು".

ವೈದಿಕ ಶಿಕ್ಷಣ: ವೈದಿಕ ಶಿಕ್ಷಣದಲ್ಲಿ ಗುರುವಿನ ಪಾತ್ರ ಜೊತೆಯಲ್ಲಿ ಶಿಷ್ಯನಂತಹ ಪಾರಂಪರಿಕ ವ್ಯವಸ್ಥೆ. ಆಗ ಮಾನವ ಮತ್ತು ಪ್ರಾಕೃತಿಕ ವಿಕೋಪಗಳಂತಹ ಸಂದರ್ಭಗಳಲ್ಲಿ ಈ ಮಾನವ ಸಹಕಾರಿಯಾಗಿದೆ. ಸಂಗೀತ, ನೃತ್ಯದಂತಹ ಕಲೆಗಳ ಮನಸ್ಸಿನ ಉಲ್ಲಾಸ ಮತ್ತು ಆತಂಕಗಳನ್ನು ದೂರ ಮಾಡುತ್ತದೆ. ಔಪಚಾರಿಕ ಶಿಕ್ಷಣದಂತೆ ವೈದಿಕ ಶಿಕ್ಷಣದಲ್ಲಿ ಮಕ್ಕಳು ಈಗ ಕಲಿಯುತ್ತಾರೆ ಎಂಬುದು ಗಾಂಧೀಜಿಯವರ ನಂಬಿಕೆ.

ಸಾಮಾಜಿಕ ಶಿಕ್ಷಣ: ಸಾಮಾಜಿಕ ಶಿಕ್ಷಣದಲ್ಲಿ ಗಂಡು-ಹೆಣ್ಣಿನ ಪ್ರಾಮುಖ್ಯತೆ. ಮೌಲ್ಯಾಧಾರಿತ ಶಿಕ್ಷಣವಾಗಿರಬೇಕು ಎಂದಿದ್ದಾರೆ. ಶಿಕ್ಷಣ ಸರ್ವರಿಗೂ ಸಿಗುವಂತಾಗಬೇಕು. ಜೀವನೋಪಾಯಕ್ಕಾಗಿ ಮಾತ್ರ ಅಲ್ಲ ಕಲಿತುಕೊಳ್ಳಬೇಕು. ಸಾಕ್ಷರತೆಗಾಗಿ ವಯಸ್ಕರ ಶಿಕ್ಷಣ. ದೇಶ ದೇಶದೆಡೆಗೆ ಅವಶ್ಯಕವಾಗಬೇಕು. ಸಾಮೂಹಿಕ ಶಿಕ್ಷಣದ ಉದ್ದೇಶಕ್ಕೆ ಸ್ಪಷ್ಟ ಪ್ರಚಾರವಾಗಬೇಕು. ದಿನನಿತ್ಯದ ಉಪಯೋಗವಾಗಬೇಕು. ಬಲವಂತವಾಗಬಾರದು ಎಂದಿದ್ದಾರೆ.

ಮಹಿಳಾ ಶಿಕ್ಷಣ: ಮಹಿಳಾ ಶಿಕ್ಷಣ ಯೋಜನೆಯಲ್ಲಿ ಮಹಿಳೆಯ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದಿದ್ದಾರೆ. ಮಹಿಳೆ, ದೇಶದ ಶಕ್ತಿ ಗಂಡಿನ ಸಮಾನಳು. ತನ್ನ ಅಗತ್ಯತೆಗಾಗಿ ಹೋರಾಡುವ ಶಿಕ್ಷಣ ಪಡೆಯಬೇಕು. ಮಹಿಳೆಯರಿಗೂ ಪುರುಷರಷ್ಟೇ ಸಮಾನ ಶಿಕ್ಷಣ ಸೌಲಭ್ಯ ನೀಡಬೇಕು. ಅವಶ್ಯಕತೆಯಿದ್ದರೆ ಪ್ರತ್ಯೇಕ ಶಾಲೆಗಳನ್ನು


ISBN : 978-93-5396-797-0

ಏನಾದರೂ ತಪ್ಪಿಲ್ಲ ಎಂದಿದ್ದಾರೆ. ಅವಳು ವಿದ್ಯಾವಂತೆಯಾದರೆ ಕುಟುಂಬದಲ್ಲಿ ಮಕ್ಕಳಿಗೆ ನೈರ್ಮಲ್ಯತೆ, ಆರೋಗ್ಯದ ಕಾಳಜಿ ಹಾಗೂ ಸಾಮಾಜಿಕ ರೀತಿಯನ್ನು ತಿಳಿಸುತ್ತಾಳೆ ಎಂದಿದ್ದಾರೆ.

**ಧಾರ್ಮಿಕ ಶಿಕ್ಷಣ:**-ಲಾಲಸೆಯನ್ನು ಗೆಲ್ಲಬೇಕು. ಇಂದ್ರಿಯ ನಿಯಂತ್ರಣದಿಂದ ಲಕ್ಷ್ಯ ಬರುತ್ತದೆ. ಲಾಲಸೆಯನ್ನು ಗೆಲ್ಲಲಾಗದವನು ಸಮಾಜವನ್ನು ಗೆಲ್ಲಲಾರ. ಉನ್ನತ ಸೇವಾಮನೋಭಾವದಿಂದ ಆಧ್ಯಾತ್ಮಿಕ ಶಕ್ತಿಯಿಂದ ಲಭ್ಯವಾಗುವುದು. ಸಾತ್ವಿಕ ಮಾರ್ಗ ಅನುಸರಿಸಬಹುದು. ಸ್ಪಷ್ಟವಾಗಿ ಇಂದಿನ ವಿದ್ಯಾರ್ಥಿಗಳಿಗೂ ಸಹ ಇದರ ಅಗತ್ಯತೆ ಇದೆ

**ಉಪಸಂಹಾರ:** ಗಾಂಧೀಜಿಯವರ ಸಾಹಿತ್ಯ ಮತ್ತು ಶೈಕ್ಷಣಿಕ ವಿಚಾರಗಳು ಹೆಚ್ಚು ಪ್ರಚಲಿತದಲ್ಲಿರುವ ಚರ್ಚೆಯ ವಿಷಯಗಳು. ಅವರು ಶಿಕ್ಷಣ ವ್ಯವಸ್ಥೆಗೆ ಶಾಶ್ವತವಾದ ನೆಲೆಯನ್ನು ರೂಪಿಸಿದವರು. ಸತ್ಯ ಅನುಭಾವ, ಆವಿರ್ಭಾವ. ಪ್ರಯೋಜನಕಾರಿ ಅಗತ್ಯವಾದ ಶಿಕ್ಷಣದ ಮೂಲಕ ಸೃಜನಶೀಲತೆಯ ಪ್ರೇರಣೆ ನೀಡಿದವರು. ಸತ್ಯ ಮತ್ತು ಅಹಿಂಸೆಯನ್ನು ಅನುಷ್ಠಾನಕ್ಕೆ ತಂದವರು. ಮಾರಕ ಅಸ್ತ್ರಗಳ ಅಪಾರ ರಾಶಿಯ ಮೇಲೆ ನಿಂತಿರುವ ಜಗತ್ತಿನ ಭವಿಷ್ಯ ಅನಿಶ್ಚಿತವಾಗಿರುವ ಇಂದಿನ ಸಂದಿಗ್ಧ ಸನ್ನಿವೇಶದಲ್ಲಿ ಶಾಂತಿಯುತ ವಿಶ್ವಮಾನವ ಸಮಾಜದ ರಚನೆಗೆ ಗಾಂಧಿ ಮಾರ್ಗ – ಪ್ರಸ್ತುತವೆನಿಸುತ್ತದೆ. ಎಲ್ಲಾ ಸಮಸ್ಯೆಗಳನ್ನು ಅಹಿಂಸೆಯ ಮೂಲಕ ಪರಿಹಾರ ಮಾಡಿಕೊಳ್ಳಬೇಕು. ಶಿಕ್ಷಣ ಒಂದೇ ಮನುಷ್ಯನನ್ನು ಪಶುತ್ವದಿಂದ ದೈವತ್ವದತ್ತ ಕರೆದುಕೊಂಡು ಹೋಗುತ್ತದೆ ಎಂಬ ಗಾಂಧೀಜಿಯವರ ಮಾತು ಅಕ್ಷರಶಃ ಸತ್ಯ

**ಆಧಾರ ಗ್ರಂಥಗಳು**

(1) ಸ್ವಾತಂತ್ರ್ಯದಾತನ ಚಿಂತನೆಗಳು – ಡಾ॥ ಬಿ. ಎಸ್. ವಿಶ್ವನಾಥ್ – ವಸಂತ ಪ್ರಕಾಶನ, ಬೆಂಗಳೂರು 2008

(2) ಗಾಂಧಿ ಚಿಂತನೆಗಳು "ಬಾಪೂ ದೃಷ್ಟಿಯಲ್ಲಿ ಭಾಷೆ ಮತ್ತು ಶಿಕ್ಷಣ" – ಡಾ॥ ಎಂ. ಪಿ. ಭುವನೇಶ್ವರ ಪ್ರಸಾದ್-ಸುರಭಿ ಗ್ರಾಫಿಕ್ಸ್

(3) ಗಾಂಧೀಚರಿತಮಾನಸ – ಪ್ರೊ. ವೆಂಕೋಬರಾವ್ – ಜೀವನ ವಿಕಾಸ ಸಾಹಿತ್ಯ ಪ್ರಕಾಶನ, ಬೆಂಗಳೂರು – 2004

(4) ವಿಶ್ವರೂಪಿ ಮಹಾನ್ ವ್ಯಕ್ತಿಗಳು: ಪ್ರೊ. ಶಂಕರಾನಂದ – ಇಂದಿರಾ ಪ್ರಕಾಶನ, ಬೆಂಗಳೂರು – 2004

(5) ಭಾರತ ಸ್ವಾತಂತ್ರ್ಯದ ಮೇರು ವ್ಯಕ್ತಿಗಳು: ಪ್ರೊ. ಪಿ. ಆರ್. ಪ್ರಾಣೇಶ್ವರ್-ನವಭಾರತಿ ಪ್ರಕಾಶ, ಮೈಸೂರು – 1999

(6) ಮಹಾತ್ಮಾ ಗಾಂಧಿ – ಪ್ರೊ. ಎಂ. ಕೆ. ಸಿಂಗ್ – ಅನಮೋಲ್ ಪಬ್ಲಿಕೇಷನ್ಸ್ ಪಿ.ವಿ.ಟಿ. ಲಿಮಿಟೆಡ್

(1) ಮೈ ಎಕ್ಸ್‌ಪೆರಿಮೆಂಟ್ಸ್ ವಿಥ್ ಟ್ರೂಥ್ – ಪ್ರೊ. ಎಂ. ಕೆ. ಗಾಂಧಿ – ನವಜೀವನ ಪಬ್ಲಿಷಿಂಗ್ ಹೌಸ್, ಅಹಮದಾಬಾದ್, 1823

(2) ನ್ಯೂ ಟ್ರೆಂಡ್ಸ್ ಇನ್ ಇಂಡಿಯನ್ ಎಜ್ಯುಕೇಶನ್ – ಡಾ॥ ನೀಲಮಣಿ ಉಪಾಧ್ಯಾಯ – ಎಜುಕೇಷನಲ್ ಸಪ್ಲೈರ್ಸ್ ಅಂಡ್ ಟ್ರೇಡರ್ಸ್, ದೆಹಲಿ – 2013

ISBN : 978-93-5396-797-0